INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -3, September-October, 2021,
PageNo,18-29
Peer Reviewed Journal, Referred Journal

# ವಸಾಹತು ಕಾಲದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಾಗರೋತ್ತರ ವ್ಯಾಪಾರ ಸಂಪರ್ಕಗಳು

**ಎಂ.ಲೋಕೇಶ್**[1]

ಹದಿನಾರನೆಯ ಶತಮಾನದ ಪೂರ್ವದಲ್ಲಿ ಕರಾವಳಿ ವ್ಯಾಪಾರವನ್ನು ಅರಬರು ನಿಯಂತ್ರಿಸುತ್ತಿದ್ದರು. ಆದರೆ, ಹದಿನಾರನೆಯ ಶತಮಾನದ ಅನಂತರ ಪೋರ್ಚುಗೀಸರು ಭಾರತದ ಸಾಗಾಣಿಕಾ ವ್ಯಾಪಾರವನ್ನು ಅರಬರಿಂದ ಕಸಿದುಕೊಂಡರು. ಅನಂತರ ಉತ್ತರ ಕನ್ನಡ ಜಿಲ್ಲೆಯ ಬಂದರುಗಳ ಮೇಲೆ ಪೋರ್ತುಗೀಸರು ತಮ್ಮ ಹತೋಟಿಯನ್ನು ಸಾಧಿಸಲು ಪ್ರಯತ್ನಿಸಿದರು. ಈ ಕಾಲಕ್ಕಾಗಲೇ ಉತ್ತರ ಕನ್ನಡ ಜಿಲ್ಲೆಯ ಪ್ರಮುಖ ಸರಕುಗಳಾದ ತೇಗು, ಶ್ರೀಗಂಧ, ಯಾಲಕ್ಕಿ, ಮೆಣಸು, ಅಡಿಕೆ, ಅಕ್ಕಿ, ಗೋಧಿ, ಕಡ್ಲೆ, ಅರಳೆಗಳಂಥವು ಮುಂಬಯಿ, ರತ್ನಾಗಿರಿ, ಸತಾರ, ಪುಣೆ, ಸೊಲ್ಲಾಪೂರ, ಬಾರ್ಸಿ, ಬಳ್ಳಾರಿ, ಮೈಸೂರು ಪ್ರದೇಶಗಳಿಗೆ ಸಾಗುತ್ತಿತ್ತು. ದೇಶಿ ವಸ್ತ್ರಗಳು, ಬೆಳ್ಳಿ, ಬಂಗಾರ, ತಾಮ್ರ, ಹಿತ್ತಾಳೆ ಪಾತ್ರೆಗಳು, ಕಾಜಿನ ಬಳೆ, ಕಬ್ಬಿಣ, ತಟ್ಟುಗಳಂಥ ಸರಕು ಮತ್ತು ಸಾಮಾನುಗಳು ಈ ಉತ್ತರ ಕನ್ನಡವನ್ನು ಸೇರುತ್ತಿದ್ದವು ಎಂಬುದನ್ನು ಗುರುತಿಸಬಹುದು.

ಮಧ್ಯಯುಗದ ಆರಂಭದಲ್ಲಿ ಭಾರತವು ವಿಶ್ವದ ವಿಭಿನ್ನರೊಂದಿಗೆ ವ್ಯಾಪಕವಾದ ವ್ಯಾಪಾರ ಸಂಪರ್ಕವನ್ನು ಹೊಂದಿತ್ತು. ಆದ್ದರಿಂದ ಹಾಗಾಗಿ ಭಾರತದ ಕರಾವಳಿ ತೀರಗಳು ಕೂಡಾ ವಿದೇಶಿ ವ್ಯಾಪಾರದ ಕೇಂದ್ರಗಳಾದವು. ಮುಸ್ಲಿಮರು ತಮ್ಮಲ್ಲಿದ್ದ ಭಾರತದಲ್ಲಿನ ವ್ಯಾಪಾರದ ಮೇಲಿನ ನಿಯಂತ್ರಣವನ್ನು ಅನಂತರ ಅದನ್ನು ಪೋರ್ಚುಗೀಸರಿಗಿಟ್ಟರು. ಆವಾಗ ಗುಜರಾತ್, ಗೋವಾ, ಕ್ಯಾಲಿಕಟ್, ಕೊಚ್ಚಿನ್, ಕ್ವಿಲಾನ್‌ಗಳು ಭಾರತದ ಪಶ್ಚಿಮ ಕರಾವಳಿಯ ಪ್ರಮುಖ ಬಂದರುಗಳಾಗಿ ರೂಪುಗೊಂಡವು. ಈ ಬಂದರುಗಳು ವಿಶ್ವದ ವಿವಿಧ ಭಾಗಗಳಿಂದ ಜನರನ್ನು ಕರೆತರುವಲ್ಲಿ ಮಹತ್ವದ ಪಾತ್ರವಹಿಸಿದವು. ಹಾಗೆಯೇ, ವಿಜಯನಗರ ಸಾಮ್ರಾಜ್ಯದ ಅರಸರು ತಮ್ಮ ವ್ಯಾಪಾರಿಗಳಿಗೆ ಮಾತ್ರವಲ್ಲದೇ ವಿದೇಶಿ ವ್ಯಾಪಾರಿಗಳಿಗೂ ಸಂಪೂರ್ಣ ಸ್ವಾತಂತ್ರ್ಯವನ್ನು ನೀಡುವ ಮೂಲಕ ಪ್ರಯಾಣಿಕರನ್ನು ಸೆಳೆದರು. ವಿಜಯನಗರದ ರಾಜರು ಮತ್ತು ಆಡಳಿತಗಾರರು ವಿದೇಶಿ ವ್ಯಾಪಾರಿಗಳಿಗೆ ನೀಡಿದ ಮಾಲೀಕತ್ವ, ರಾಷ್ಟ್ರೀಯತೆ ಮತ್ತು ಧರ್ಮಕ್ಕೆ ನೀಡಿದ ಮಾನ್ಯತೆ ತಮ್ಮ ಪ್ರಜೆಗಳಿಗೆ ಮತ್ತು ಉದ್ಯಮಶೀಲರಿಗೆ ತೋರಿಸಿದ ನ್ಯಾಯವು ಅಪಾರ ಸಂಖ್ಯೆಯ ವ್ಯಾಪಾರಿಗಳನ್ನು ನಗರಕ್ಕೆ ಸೆಳೆಯಿತು.

1 **.ಸಹಾಯಕ ಪ್ರಾಧ್ಯಾಪಕರು, ಐ.ಡಿ.ಎಸ್.ಜಿ ಸರ್ಕಾರಿ ಕಾಲೇಜು, ಚಿಕ್ಕಮಗಳೂರು.**

ಕೆನರಾದಲ್ಲಿ ಪೋರ್ಚುಗೀಸರ ವಾಣಿಜ್ಯ ಚಟುವಟಿಕೆಗಳು 16 ರಿಂದ 17ರ ಮಧ್ಯದ ಶತಮಾನದವರೆಗೆ ಇರುವುದಾಗಿ ಹಲವು ಹತ್ತು ಆಕರಗಳು ಮಾಹಿತಿಯನ್ನು ಒದಗಿಸುತ್ತವೆ. ಬಹುಮುಖ್ಯವಾಗಿ ಅವರು ವ್ಯಾಪಾರಕ್ಕಾಗಿ ಭಾರತಕ್ಕೆ ಬಂದವರು. ಅವರಿಗೆ ಬೇಕಾದ ಮಸಾಲೆಗಳಲ್ಲಿ ಒಂದಾದ 'ಮೆಣಸು' ಮತ್ತು ಸುವಾಸನೆಭರಿತ ಅಕ್ಕಿಯು ಕರ್ನಾಟಕದ ಕರಾವಳಿಗೆ ಅವರನ್ನು ಆಕರ್ಷಿಸಿತು. ಈ ಪ್ರದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಮೆಣಸಿನ ಜೊತೆಗೆ ಸುವಾಸನೆಭರಿತ ಅಕ್ಕಿಯ ಗುಣಮಟ್ಟದ ಉತ್ಪಾದನೆಯು ವ್ಯಾಪಾರ ನಡೆಸಲು ಸಾಕಷ್ಟು ಅವಕಾಶವನ್ನು ಅವರಿಗೆ ನೀಡಿತು. ಕ್ರಮೇಣ ಪೋರ್ಚುಗೀಸ್ ವ್ಯಾಪಾರಿಗಳು ಅಕ್ಕಿಯ ಪೂರೈಕೆಗಾಗಿ ಕೆನರಾವನ್ನು ಹೆಚ್ಚು ಅವಲಂಬಿಸಿದರು. ಕ್ರಿ.ಶ. 1554ರ ಹೊತ್ತಿನಲ್ಲಿ ಪೋರ್ಚುಗೀಸ್‌ರಿಗೆ ಸ್ಥಳೀಯ ಮುಖ್ಯಸ್ಥರು ಗೌರವ ರೂಪದಲ್ಲಿ ಹೆಚ್ಚಿನ ಅಕ್ಕಿಯನ್ನು ನೀಡುತ್ತಿದ್ದರು. ಅವರು ಅಕ್ಕಿಗಾಗಿ ಸ್ಥಳೀಯ ವ್ಯಾಪಾರಿಗಳನ್ನು ಮತ್ತು ಮಧ್ಯವರ್ತಿಗಳನ್ನು ಅವಲಂಬಿಸಬೇಕಾಗಿತ್ತು.

"ವಸಾಹತು ಕೃಷಿ ನೀತಿ, ಅರಣ್ಯ ನೀತಿ ಹಾಗೂ ಕೈಗಾರಿಕಾ ನೀತಿಗಳು ಜಾಗತಿಕ ಮಾರುಕಟ್ಟೆ ಕೇಂದ್ರಿತವಾಗಿದ್ದವು. ಇವು ಸ್ಥಳೀಯ ಅರ್ಥಿಕತೆಯಲ್ಲಿ ಬದಲಾವಣೆಗಳನ್ನು ತಂದು ಸಂಮಿಶ್ರವಾದ ಅರ್ಥ ವ್ಯವಸ್ಥೆಯೊಂದನ್ನು ಹುಟ್ಟು ಹಾಕಿದವು. ಈ ಹೊಸ ವ್ಯವಸ್ಥೆಯಲ್ಲಿ ಕೃಷಿ ಉದ್ದಿಮೆಯಾಗಿ ಪರಿವರ್ತನೆಗೊಂಡು ಕೃಷಿಗೆ ಸಂಬಂಧಿಸಿದ ಕೈಗಾರಿಕೆಗಳು ಆರಂಭಗೊಂಡವು. ಹೀಗೆ, ಕೈಗಾರಿಕಾ ಜಗತ್ತು ಕೃಷಿ ಲೋಕಕ್ಕೆ ನೇರವಾಗಿ ಪ್ರವೇಶವನ್ನು ಪಡೆಯುವಂತಾಯಿತು. ಈ ಪ್ರಕ್ರಿಯೆಯಲ್ಲಿ ನೇರವಾಗಿ ಭಾಗಿಗಳಾದವರು ಬ್ರಿಟನ್ನಿನ ವರ್ತಕರು ಹಾಗೂ ಸ್ಥಳೀಯ ಶ್ರೀಮಂತ ಭೂಮಾಲೀಕ ವರ್ಗಗಳು. ಇವರಿಬ್ಬರ ಮಧ್ಯ ಕೊಂಡಿಯಾಗಿ ಕೆಲಸ ಮಾಡಿದವರು ಸ್ಥಳೀಯ ಶ್ರೀಮಂತ ವರ್ತಕರು. ಈಸ್ಟ್ ಇಂಡಿಯಾ ಕಂಪನಿಯ ವ್ಯಾಪಾರದ ಮೇಲಿನ ಏಕಸ್ವಾಮ್ಯ ರದ್ದಾಗುವವರೆಗೆ ಖಾಸಗಿ ವರ್ತಕರು ಸ್ವತಂತ್ರವಾಗಿ ವ್ಯವಹರಿಸುವಂತಿರಲಿಲ್ಲ. 1813ರ ಚಾರ್ಟರ್ ಕಾಯ್ದೆಯು ಈಸ್ಟ್ ಇಂಡಿಯಾ ಕಂಪನಿಯ ಭಾರತಿಯ ವ್ಯಾಪಾರದ ಮೇಲಿನ ಸ್ವಾಮ್ಯವನ್ನು ರದ್ದುಪಡಿಸಿತು. 1833ರ ಚಾರ್ಟರ್ ಕಾಯ್ದೆಯು ಕಂಪನಿಯ ವ್ಯಾಪಾರ ಚಟುವಟಿಕೆಗಳನ್ನು ರದ್ದುಗೊಳಿಸಿ, ಬ್ರಿಟನ್ ಚಕ್ರವರ್ತಿಯ ಅಧೀನದಲ್ಲಿ ಅದನ್ನು ಸಂಪೂರ್ಣವಾಗಿ ಆಡಳಿತದ ಅಂಗವನ್ನಾಗಿ ಮಾಡಿದರು. ಇದು ಯುರೋಪಿನ ಖಾಸಗಿ ವರ್ತಕರು ಅಂತರಾಷ್ಟ್ರೀಯ ವ್ಯಾಪಾರದಲ್ಲಿ ತಮ್ಮ ತಮ್ಮ ನೆಲೆಗಳನ್ನು ಭದ್ರಪಡಿಸಿಕೊಂಡು ಬಂಡವಾಳ ಹೂಡಲು ಅವಕಾಶ ನೀಡಿತು. ಯುರೋಪಿನ ಕೈಗಾರಿಕೆಗಳಿಗೆ ಬೇಕಾಗಿರುವ ಕಚ್ಚಾ ಸಾಮಾಗ್ರಿಗಳನ್ನು ಪೂರೈಸುವುದು ಹಾಗೂ ಅವುಗಳನ್ನು ಭಾರತದಲ್ಲಿ ಅಭಿವೃದ್ಧಿಪಡಿಸುವುದು ಈ ವರ್ತಕರ ಪ್ರಮುಖ ಉದ್ದೇಶವಾಗಿತ್ತು. ಆ ಕಾರಣದಿಂದ ವಾಣಿಜ್ಯ ಬೆಳೆಗಳನ್ನು ಬೆಳೆಯಬಹುದಾದ ಪ್ರದೇಶಗಳನ್ನು ಗುರುತಿಸಿ ಅಭಿವೃದ್ಧಿ ಪಡಿಸುವಲ್ಲಿ ಬ್ರಿಟಿಷ್ ಆಡಳಿತದ ಮನವೊಲಿಸುವಲ್ಲಿ ಯುರೋಪಿನ ಖಾಸಗಿ ವರ್ತಕರು ಯಶಸ್ವಿಯಾದರು."

ಪೀಠರ್ ಮಂಡಿ ಎಂಬ ಇಂಗ್ಲೆಂಡಿನ ಪ್ರವಾಸಿ ಭಾರತದಲ್ಲಿ ಅತೀ ಹೆಚ್ಚು ಕಾಲ ಪ್ರವಾಸ ಮಾಡಿದ ಯಾತ್ರಿಕನಾಗಿದ್ದಾನೆ. ಈತ 1637ನೇ ಜನವರಿ 17ರಂದು ಗೋವಾದಿಂದ ತನ್ನ ಪ್ರಯಾಣವನ್ನು ಆರಂಭಿಸಿ 21ರಂದು ಕಾರವಾರ ತಲುಪಿದನು. ಅಲ್ಲಿ ತಮಗೆ ಬೇಕಾದ ಸೌದೆಯನ್ನು ಹಡಗಿನಲ್ಲಿ ತುಂಬಿಕೊಂಡರು. ಅಲ್ಲಿಂದ 23ನೆಯ ತಾರೀಖು ಪೋರ್ಚುಗೀಸರಿಗೆ ಸೇರಿದ ಒನೂರ (ಹೊನ್ನಾವರ) ತಲುಪಿದನು. ಅಲ್ಲಿ ಆತ ಅಕ್ಕಿ ತುಂಬಿಕೊಂಡು ಗೋವಾಕ್ಕೆ ಹೊರಟ 40-50 ಫ್ರಿಗಾಟ್‌ಗಳಿದ್ದವನ್ನು ಕಂಡನು. ಅನಂತರ ಒನೂರದಿಂದ (ಹೊನ್ನಾವರ) ಹೊರಟು ಬಟಾಕಲಾಕ್ಕೆ (ಭಟ್ಕಳ) ಬಂದನು. ಆಗ ದಾರಿಯಲ್ಲಿ ಆತ 200 ಹಡಗುಗಳನ್ನು ಕಂಡನು. ಅವುಗಳಲ್ಲಿ 16 ದೊಡ್ಡ ಹಡಗುಗಳು ಜೀಲಾನ (ಸೀಲೊನ, ಶ್ರೀಲಂಕಾ) ದಿಂದ ಬಂದವುಗಳಾಗಿದ್ದವು. ಅವುಗಳಲ್ಲಿ ದಾಲ್ಚಿನ್ನಿಯನ್ನು ತುಂಬಿದ್ದರು. ಅದರಲ್ಲಿ ಕೆಲವು ಯುದ್ಧದ ಹಡಗುಗಳಾಗಿದ್ದರೆ, ಇನ್ನೂ ಕೆಲವು ಹಡಗುಗಳಲ್ಲಿ ಅಕ್ಕಿಯನ್ನು ತುಂಬಿಕೊಂಡು ಗೋವಾಕ್ಕೆ ಸಾಗುತ್ತಿದ್ದವು. ಮುಂದೆ ಮಲಬಾರ ಹತ್ತಿರ ಕಡಲುಗಳ್ಳನಾದ ಬಾಬಾ ರಾವುತನ ಭೇಟಿ ಮಾಡಿದನು. ಆತನಿಗೆ ಒಂದು ಕಂಚಿನ ಬಂದೂಕು ನೀಡಿ ಆತನಿಂದ ಮೆಣಸನ್ನು ಪಡೆದನು. ಆ ರಾವುತನ ಮೂಲಕ ಕೆಳದಿಯ ಅರಸರಿಗೆ ಇವರ ಹಡಗಿನ ಕ್ಯಾಪ್ಟನ್ ವೆಡ್ಡೆಲ್‌ನು ಪತ್ರದ ಮೂಲಕ ಮೆಣಸಿನ ವ್ಯಾಪಾರಕ್ಕೆ ಕೆಳದಿಯ ಬಂದರುಗಳಿಗೆ ಬರುವುದಾಗಿ ತಿಳಿಸಿದನು. ಆಗ ಕೆಳದಿಯ ಅರಸ ವೀರಭದ್ರನಾಯಕ ಆಂಗ್ಲರಿಗೆ ಬರೆದ ಪತ್ರ ಈ ರೀತಿಯಲ್ಲಿದೆ; "ನಿಮ್ಮಿಂದ ಬಂದ ಪತ್ರದ ಪ್ರಕಾರ, ನೀವು ಇಲ್ಲಿಗೆ ಸುಖವಾಗಿ ಬಂದು ಮುಟ್ಟಿರುವಿರೆಂದು, ನೀವು ಭಟ್ಕಳ ಬಂದರಿಗೆ ಬರಬೇಕೆಂಬ ನಮ್ಮ ಬಹುದಿನದ ಆಹ್ವಾನ ಈಗ ಕೈಗೂಡಿದೆ ಎಂಬುದು ನಮಗೆ ಬಹಳ ಸಂತೋಷವನ್ನುಂಟು ಮಾಡಿದೆ. ವ್ಯಾಪಾರಕ್ಕಾಗಿ ನೀವು ಬಂದಿದ್ದೀರಿ, ಈ ಕಾರಣ ಮಾಂಜಿ ನಾಯಕನನ್ನು ನಿಮ್ಮ ಬಳಿಗೆ ಕಳುಹಿಸಿದ್ದೇನೆ. ಅವರು ನಿಮ್ಮಲಿರುವ ಸರಕುಗಳನ್ನು ನೋಡಿ, ಅವುಗಳಿಗೆ ಸಾಟಿಯಾಗಿ ನಮ್ಮಲ್ಲಿರುವ ಮೆಣಸೆಲ್ಲವನ್ನೂ ನಿಮಗೆ ತೂಕಮಾಡಿ ಕೊಡುವರು. ನೀವು ಕಳುಹಿಸಿದ ಬಹುಮಾನಗಳು ತಲುಪಿದವು. ನಿಮ್ಮ ರಾಜರು ನಮ್ಮೊಡನೆ ಸ್ನೇಹ ಸೌಹಾರ್ದದಿಂದ ಇರಲು ಇಚ್ಛಿಸುತ್ತಾರೆಂಬ ವಿಷಯವನ್ನು ವ್ಯಕ್ತಪಡಿಸಿದ್ದೀರಿ. ಇದನ್ನು ಕೇಳಿ ನಮಗೆ ಬಹಳ ಸಂತೋಷವಾಗಿದೆ. ನಮ್ಮದೂ ಅದೇ ಆಸೆಯಾಗಿದೆ. ನಮ್ಮ ಮೆಣಸನ್ನೆಲ್ಲಾ ನಿಮಗೆ ಕೊಡಲು ಒಪ್ಪುತ್ತೇವೆ. ಪ್ರತಿಯಾಗಿ ನಿಮ್ಮ ದೇಶದ ಅಪೂರ್ವ ಹಾಗೂ ಒಳ್ಳೆಯ ಸರಕುಗಳನ್ನು ನಮಗೆ ಕೊಡಿ" ಆಗ 'ಮೂರು ತೂಕ ಮೆಣಸಿಗೆ ನಾಲ್ಕು ತೂಕ ಸೀಸ ಕೊಡಬೇಕೆಂದು ಕೆಳದಿಯರ ಮತ್ತು ಆಂಗ್ಲರ ಮಧ್ಯ ಒಪ್ಪಂದವಾಯಿತು.' ಆದರೆ, ಸ್ವಲ್ಪ ದಿನ ಕಳೆದ ಅನಂತರ ಕೆಳದಿಯರು ಹೆಚ್ಚು ಸೀಸ ಕೊಡಬೇಕೆಂದು ತಕರಾರು ಮಾಡಿದರು. ಈ ವಿಚಾರವನ್ನು ಮಾತನಾಡಲು 1607ರ ಫೆಬ್ರುವರಿ 21ರಂದು ಥಾಮಸ್ ರಾಬಿನ್‌ಸನ್, ಪೀಠರ್ ಮಂಡಿ ಮತ್ತು ಇಬ್ಬರು ಇಂಗ್ಲಿಷ ಅಧಿಕಾರಿಗಳು ಇಕ್ಕೇರಿಗೆ ಪ್ರಯಾಣವನ್ನು ಬೆಳೆಸಿದರು. ಅವರು ಭಟ್ಕಳದಿಂದ ಹಡೌಲಿ (ಹಾಡುವಳ್ಳಿ) ತಲುಪಿದರು. ಆಗ ಹಾಡವಳ್ಳಿ ಹಾಳು ಬಿದ್ದ ಸ್ಥಳವಾಗಿತ್ತು. ಕಲ್ಲಿನ ಕೋಟೆ, ದೇವಸ್ಥಾನಗಳು ಕುಸಿದು ಬಿದ್ದಿದ್ದವು. ಇಲ್ಲಿನ ಒಂದು

ದೇವಸ್ಥಾನದ ಮುಂದೆ 8 ಗಜಗಳಷ್ಟು ಎತ್ತರದ ಮತ್ತು ಹದಿನೆಳು ಹದಿನೆಂಟು ಅಂಗುಲಗಳಷ್ಟು ಸುತ್ತಳತೆಯ ಒಂದು ಕಂಚಿನ ಮಾನಸ್ಥಂಬವನ್ನು ಕಂಡನು. ಅಲ್ಲಿಂದ ಮುಂದೆ ಸಾಗಿ ಫೆಬ್ರುವರಿ 25ರಂದು ಹಬ್ಬದ ದಿನದಂದು ಕೆಳದಿಯ ಅರಸ ವೀರಭದ್ರ ನಾಯಕನನು ಭೇಟಿಯಾದರು. ಕೆಳದಿ ಅರಸ ಆಂಗ್ಲರಿಗೆ ಉತ್ತಮ ಆತಿಥ್ಯವನ್ನು ನೀಡಿ ಒಂದು ಪರ್ಮಾನನ್ನು ಹೊರಡಿಸಿದನು. ಅದರಂತೆ ಆಂಗ್ಲರು " ಭಟ್ಕಳದಲ್ಲಿ ತಮ್ಮ ನಿವಾಸಗಳನ್ನು ಕಟ್ಟಲು, ಅಲ್ಲಿ ತಮ್ಮ ವ್ಯಾಪಾರವನ್ನು ಮಾಡಲು ಅನುಮತಿ ನೀಡಿದನಲ್ಲದೇ ತನ್ನ ರಾಜ್ಯದಲ್ಲಿ ಬೆಳೆಯುವ ಮೆಣಸನ್ನು ಆಂಗ್ಲರಿಗೆ ಮಾತ್ರ ನೀಡುವುದಾಗಿ ತಿಳಸಿದನು. ಅಂದರೆ ಭಟ್ಕಳ ಬಂದರಿಗೆ ಪ್ರತಿ ವರ್ಷ 1.500 ರಿಂದ 2.000 ಖಂಡಿಗಳಷ್ಟು ಮೆಣಸನ್ನು ಒದಗಿಸುವುದಾಗಿ ಹೇಳದನು. ಅದರ ಪ್ರತಿಯಾಗಿ ಕೆಳದಿ ಅರಸನಿಗೆ ಆಂಗ್ಲರು ಇಂಗ್ಲೆಂಡ ಮತ್ತು ಚೀನಾದ ಅಪೂರ್ವ ಸರಕುಗಳು, ಪರ್ಷಿಯಾ ಮತ್ತು ಅರೇಬಿಯಾದ ಕುದುರೆಗಳನ್ನು ಪೂರೈಸಬೇಕೆಂದು ತಿಳಸಿದನು." ಇಕ್ಕೇರಿಯಿಂದ 1607ರ ಮಾರ್ಚ್ 2ರಂದು ಮರಳ ಭಟ್ಕಳಕ್ಕೆ ಹಿಂದಿರುಗಿ ಭಟ್ಕಳದಲ್ಲಿ ಒಂದು ಗಡಂಗ (ಪ್ಯಾಕ್ಟರಿ)ನ್ನು ಆಂಗ್ಲರು ಸ್ಥಾಪಿಸಿದರು. ವಾನವರ್ದಿ ಎಂಬುವನು ಅದರ ಮುಖ್ಯಸ್ಥನಾದನು. ಅವನ ಸಹಾಯಕ್ಕೆ ಎಂಟರಿಂದ ಹತ್ತು ಜನರಿದ್ದರು. ಆದರೆ ಈ ವ್ಯಾಪಾರಿ ಕೋಟೆ ಆರಂಭವಾದ ಒಂದು ತಿಂಗಳಲ್ಲಿ ವಾನವರ್ದಿ ಸತ್ತುಹೊದನು. ಇವನನ್ನು ಭಟ್ಕಳದಲ್ಲಿಯೇ ಸಮಾಧಿ ಮಾಡಲಾಯಿತು. ಅವನ ಅನಂತರ ನೇಮಕವಾದ ಫಾರ್ಚೂನ್ ಎಂಬುವನು ಒಂದು ವರ್ಷದ ಅನಂತರ ವಾನ್ ಡಾಂ ನಿಂದ ಕೊಲೆಯಾದನು. ಈ ಫಾರ್ಚೂನ್ ಮತ್ತು ವಾನ್ ಡಾಂರು ಇಕ್ಕೇರಿಯನ್ನು ಸಂದರ್ಶನ ಮಾಡಿದ್ದರು.  ಅನಂತರ ಪೀಟರ ಮಂಡಿ ಅಲ್ಲಿಂದ ಮಂಗಳೂರಗೆ ತೆರಳದನು.

ಪೀಟರ ಮಂಡಿ ಭಟ್ಕಳದಲ್ಲಿದ್ದಾಗ (1607) ತಾನು ನೋಡಿದ ನಾಣ್ಯಗಳು, ತೂಕ ಮತ್ತು ಅಳತೆಗಳು ಈ ರೀತಿಯಲ್ಲಿವೆ. ಅವುಗಳೆಂದರೆ;

**ನಾಣ್ಯಗಳು**:

ಪಗೋಡಾ : 15 ಆ ಫನಂ (ಹಣ) ಬೆಲೆಯ ಒಂದು ಚಿನ್ನದ ನಾಣ್ಯ.

ಫನಂ : 30 ತರೆ (ತಾರಾ) ಅಥವಾ 7 ಇಂಗ್ಲಿಷ ಷಿಲಿಂಗುಗಳು.

ತರೆ : 4 ಕಸ್ಸೆ (ಕಾಸು)ಗಳು.

ಕಸ್ಸೆ : ತಾಮ್ರದ ಸಣ್ಣ ನಾಣ್ಯ.

**ತೂಕಗಳು**:

ಒಂದು ಮಣಕ್ಕೆ 40 ಸೇರುಗಳು ಅಥವಾ 25 ಇಂಗ್ಲಿಷ ಪೌಂಡುಗಳು.

**ಅಳತೆ** :

ದ್ರವ ಪದಾರ್ಥಗಳನ್ನು ಮಣ ಮತ್ತು ಸೇರಿನಲ್ಲಿ ಅಳೆಯುತ್ತಾರೆ.

'ಹಸ್ತ' : ಇದು ಮೊಣಕೈಯಿಂದ ಮಧ್ಯದ ಬೆರಳಿನ ತುದಿಯವರೆಗೆ.

ಪಿಯೆತ್ರೊ ದೆಲ್ಲಾ ವಲ್ಲೆ ಎಂಬ ರೋಮ್ ಯಾತ್ರಿಕ 1623ರ ಫೆಬ್ರುವರಿ ತಿಂಗಳಿನಲ್ಲಿ ಸೂರತಕ್ಕೆ ಬಂದಿಳಿದು ಅಲ್ಲಿಂದ ಗೋವಾಕ್ಕೆ ಬಂದನು. ಗೋವಾದಿಂದ ಉತ್ತರ ಕ್ನನಡ ಜಿಲ್ಲೆಯ ಹೊನ್ನಾವರ ಮತ್ತು ಇಕ್ಕೇರಿಗಳನ್ನು ಸಂದರ್ಶಿಸಿದನು. ಆತ ತನ್ನ ವರದಿಯಲ್ಲಿ ತಿಳಿಸುವಂತೆ "ಕೆಳದಿಯ ವೆಂಕಟಪ್ಪನಾಯಕ 1618ರ ಸುಮಾರಿನಲ್ಲಿ ಪೋರ್ಚುಗೀಸರ ಹಾವಳಿಯನ್ನು ಯಶಸ್ವಿಯಾಗಿ ತಡೆದನು. ಅನಂತರ ಪೋರ್ಚುಗೀಸರೊಡನೆ ಸ್ನೇಹವನ್ನು ಬೆಳೆಸಬೇಕೆಂದು ವಿಠಲ ಸಿನಾಯ ಎಂಬ ರಾಯಭಾರಿಯನ್ನು ಕಳುಹಿದ. ಈತ ಬಹಳ ದಿನ ಗೋವಾದಲ್ಲಿದ್ದು ಅಲ್ಲಿನ ಪೋರ್ಚುಗೀಸರ ವೈಸರಾಯನೊಂದಿಗೆ ಒಪ್ಪಂದವನ್ನು ಮಾಡಿಕೊಂಡನು. ಒಪ್ಪಂದ ಮಾಡಿಕೊಂಡು ಕೆಳದಿಯ ರಾಯಭಾರಿ ಗೋವಾದಿಂದ ತನ್ನ ರಾಜ್ಯಕ್ಕೆ ಮರಳುವಾಗ ಆತನ ಜೊತೆ ಒಬ್ಬ ಪೋರ್ಚುಗಲ್ಲ ರಾಯಭಾರಿಯ (ಫರ್ನಾಂಡಿಸ್) ಜೊತೆ ಈ ಪಿಯೆತ್ರೊ ದೆಲ್ಲಾ ವಲ್ಲೆನು ಹೋರಟನು. ಹೀಗೆ, ಕೆಳದಿಯ ರಾಯಭಾರಿ ವಿಠಲ, ಪೋರ್ಚುಗಲ್ ರಾಯಭಾರಿ ಮತ್ತು ಪಿಯೆತ್ರೊ ದೆಲ್ಲಾ ವಲ್ಲೆ ಎಂಬ ಮೂರು ಜನರ ಪ್ರಯಾಣ ಕೆಳದಿಯ ಕಡೆಗೆ 1623ರ ಅಕ್ಟೋಬರ ತಿಂಗಳಲ್ಲಿ ಪ್ರಾರಂಭವಾಯಿತು. ಇವರು ಗೋವಾದಿಂದ ಒನೂರ (ಹೊನ್ನಾವರ)ವರೆಗೆ ಹಡಗಿನಲ್ಲಿ ಬಂದರು. ಈ ಪ್ರಾಯಾಣದಲ್ಲಿ ಅವರ ಜೊತೆ ಒಟ್ಟು 10 ಹಡಗುಗಳಿದ್ದವು. ಅದರ ಒಂದು ಹಡಗಿನಲ್ಲಿ ಮಾರಾಟಕ್ಕೆ ತೆಗೆದುಕೊಂಡ ಕುದುರೆಗಳು ಮತ್ತು 5 ಹಡಗುಗಳು ಯುದ್ಧದ ಹಡಗುಗಳಾಗಿದ್ದವು. ಇವರು ತಮ್ಮ ಪ್ರಯಾಣವನ್ನು ಆರಂಭಿಸಿದ ಅನಂತರ ಅಕ್ಟೋಬರ್ 16ರ ಬೆಳಗ್ಗೆ ಇವರಿಗೆ ಮಲಬಾರ ಕಡಲುಗಳ್ಳರ 'ಪರೋಸ್' ಎಂಬ ಹಡಗುಗಳು ಕಾಣಿಸಿದವು. ಸುಮಾರು ಒಂದು ಗಂಟೆ ಕಾಲ ಆ ಹಡಗುಗಳನ್ನು ಇವರು ಬೆನ್ನಟ್ಟಿದರು. ಆದರೆ ಅವು ಸಿಗಲಿಲ್ಲ. ಆ ರಾತ್ರಿ ಇವರು ಅಂಜೆದೀವ್ ದ್ವೀಪಕ್ಕೆ ತೆರಳಿ ಮಾರನೆಯ ದಿನ ಒನೂರ (ಹೊನ್ನಾವರ) ತಲುಪಿ ತಮ್ಮ ಹಡಗುಗಳನ್ನು ಲಂಗರು ಹಾಕಿದರು. ಈ ಒನೂರ ಆಗ ಸಮುದ್ರ ತೀರದ ಒಂದು ಒಂದು ಸಣ್ಣ ಹಳ್ಳಿಯಾಗಿತ್ತು. ಇಲ್ಲಿನ ಕೋಟೆಯ ಒಳಗೆ ಪೋಚುಗೀಸರ ವಾಸದ ಮನೆಗಳಿದ್ದವು. ಸೆಂಟ್ ಕ್ಯಾತರಿನ್ ಮತ್ತು ಸೆಂಟ್ ಆಂತೋಣಿ ಹೆಸರಿನ ಎರಡು ಚರ್ಚಗಳಿದ್ದವು. ಕೊಟೆಯ ಹೊರಗಡೆ ಮಾರುಕಟ್ಟೆ ಪ್ರದೇಶವಿತ್ತು. ಆಗ ದಿಪಾವಳಿ ಹಬ್ಬ ಸುರುವಾಗಿದ್ದರಿಂದ ಈ ಮೂವರು ಒನೂರ (ಹೊನ್ನಾವರ)ದಲ್ಲಿಯೇ ಕೆಲವು ಕಾಲ ತಂಗಿದ್ದರು. ಅಷ್ಟರಲ್ಲಿಯೇ ವೆಂಕಟಪ್ಪನ ಪ್ರೀತಿಯ ಮಡದಿ ಭದ್ರಮ್ಮ ತೀರಿಕೊಂಡಳು. ಈ ಮೂವರು ಹೊನ್ನಾವರ ತಲುಪಿದ ವಿಷಯ ತಿಳಿದರು ಕೂಡಾ ವೆಂಕಟಪ್ಪ ನಾಯಕ ಇವರನ್ನು ಕರೆಯಿಸಿಕೊಳ್ಳು ಏಕೋ ಆಸಕ್ತಿವಹಿಸಲಿಲ್ಲ. ಆಗ ಈ ಮೂವರು ತಮ್ಮ ಸರಕುಗಳೊಂದಿಗೆ ನದಿಯಲ್ಲಿ ದೋಣಿ, ಕುದುರೆ ಹಾಗು 'ಮಂಚಿವೆ' ಎಂದು ಕರೆಯಲಾಗುತ್ತಿದ್ದ ಪಲ್ಲಕ್ಕಿಯಲ್ಲಿ ಕುಳಿತು ಸಾಗಿ ಮುಂದೆ ಕೆಲವು ದೂರ ನಡೆದುಕೊಂಡು ಹೋಗಿ ಸಂಜೆಹೊತ್ತಿಗೆ ಗರ್ಸೊಪ (ಗೇರುಸೊಪ್ಪೆ) ತಲುಪಿದರು. ಆತ ತಿಳಿಸುವಂತೆ ಈ ಗೇರುಸೊಪ್ಪೆಯು ಹಿಂದೆ ವೈಭವದ ನಗರವಾಗಿತ್ತು,

ಪೋರ್ಚುಗೀಸರು ಮೆಣಸನ್ನು ಇಲ್ಲಿಂದಲೆ ಪಡೆಯುತ್ತಿದ್ದರು. ಈ ಪ್ರದೇಶದಲ್ಲಿ ಬೆಳೆಯುವಷ್ಟು ಮೆಣಸು ಬೇರೆಲ್ಲಿಯೂ ಬೆಳೆಯುವದಿಲ್ಲಾ. ಈ ಕಾರಣದಿಂದಲೇ ಪೋರ್ಚುಗೀಸರು ಗೇರುಸೊಪ್ಪೆ ರಾಣಿಯನ್ನು 'ರಯ್ನಾ ದ ಪಿಮೆಂತಾ' ಅಂದರೆ 'ಮೆಣಸಿನ ರಾಣಿ' ಎಂದು ಕರೆಯುತ್ತಿದ್ದರು. ಆದರೆ ಪಿಯೆತ್ರೊ ದೆಲ್ಲಾ ವಲ್ಲೆ ಗೇರುಸೊಪ್ಪೆ ತಲುಪಿದಾಗ (1623ರ ಅಕ್ಟೋಬರ) ಅದು ಕಾಡಾಗಿತ್ತು. ಮನೆಗಳಿದ್ದ ಕಡೆ ಭಾರಿ ಭಾರಿ ಮರಗಳು ಬೆಳೆದು ನಿಂತಿದ್ದವು. ಅಲ್ಲಿ ರೈತರ ನಾಲ್ಕು ಹುಲ್ಲು ಗುಡಿಸಲುಗಳನ್ನು ಬಿಟ್ಟರೆ ಅಲ್ಲಿ ಬೇರಾವ ಜನವಸತಿಯೂ ಕಂಡುಬರುವುದಿಲ್ಲ."

ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಅಕ್ಕಿ, ಮೆಣಸು, ಕಬ್ಬು, ತೆಂಗಿನಕಾಯಿ ಇತ್ಯಾದಿಗಳ್ನು ಬೆಳೆಯುದನ್ನು ಅಂದಿನ ಪಾಶ್ಚಾತ್ಯ ಜಗತ್ತು ತಿಳದಿತ್ತು. ಅದರಲ್ಲು ಕೆನರಾ ಭಾಗದಲ್ಲಿ ಅದರಲ್ಲೂ ವಿಶೇಷವಾಗಿ ಗೇರೊಸೊಪ್ಪಾ ಸುತ್ತ ಮುತ್ತ ಗುಣಮಟ್ಟದ ಕರಿಮೆಣಸನ್ನು ಬೆಳೆಯುತ್ತಿದ್ದುದನ್ನು ಪೋರ್ಚುಗೀಸ್ ದಾಖಲೆಗಳು ಸೂಚಿಸುತ್ತವೆ. ಇದಲ್ಲದೆ ಕರಾವಳಿ ಕರ್ನಾಟಕವು ಅಕ್ಕಿ ಮತ್ತು ಬಟ್ಟೆಯ ರಫ್ತಿಗೂ ಕೂಡಾ ಹೆಸರುವಾಸಿಯಾಗಿತ್ತು.

16ನೆಯ ಶತಮಾನದ ನಂತರ ಬ್ರಿಟಿಷರ ಸ್ಟೀಮನ್ಯಾವಿಗೆಶನ್ ಕಂಪನಿಯವರ ಹೊಗೆ ಹಡಗುಗಳು ವಾರಕ್ಕೊಮ್ಮೆ ಉತ್ತರ ಕನ್ನಡ ಜಿಲ್ಲೆಯ ಬಂದರುಗಳಿಗೆ ಬರುತ್ತಿದ್ದವು. ಈ ಹಡಗುಗಳು ಕಾರವಾರ, ಕುಮಟಾ ಬಂದರುಗಳಿಗೆ ಮುಂಬಯಿಂದ ವಿದೇಶದ ಸರಕುಗಳನ್ನು ತರುತ್ತಿದ್ದರು. ಈ ಸರಕುಗಳನ್ನು ಸ್ಥಳಿಯವಾಗಿ ಮತ್ತು ಚಕ್ಕಡಿಗಳ ಮೂಲಕ ಧಾರವಾಡ ಸುತ್ತಲಿನ ವ್ಯಾಪಾರದ ಸ್ಥಳಗಳಿಗೆ ಸಾಗಿಸಲಾಗುತ್ತಿತ್ತು. ಪೋರ್ಚುಗೀಸ್ ಸಮಯದಲ್ಲಿ ಬಸ್ರೂರ್ ಮುಖ್ಯಸ್ಥರು ಪೋರ್ಚುಗೀಸರಿಗೆ ಗೌರವವಾಗಿ ಅಕ್ಕಿ ಚೀಲಗಳನ್ನು ನೀಡುತ್ತಿದ್ದರು. ಭಟ್ಕಳ, ಬಾರ್ಕೂರ್ ಮತ್ತು ಬಸ್ರೂರ್‌ನಿಂದ ಉತ್ತಮವಾದ ಬಿಳಿ ಅಕ್ಕಿಯನ್ನು ನೆರೆಯ ಸ್ಥಳಗಳಾದ ಮಲಬಾರ್, ಉತ್ತರ ಕೆನರಾ ಮತ್ತು ಕೆಂಪು ಸಮುದ್ರದ ಬಂದರುಗಳ ಮೂಲಕ ಪರ್ಷಿಯನ್ ಕೊಲ್ಲಿಗೆ ರಫ್ತು ಮಾಡಲಾಗುತ್ತಿತ್ತು.

ಸರಕುಗಳ ವಿನಿಮಯ ಕೇಂದ್ರಗಳಿಂದ ಅಕ್ಕಿ ಮತ್ತು ಮೆಣಸು ಹೊರತುಪಡಿಸಿ, ಆಗಾಗ್ಗೆ ವಾಣಿಜ್ಯಕ್ಕಾಗಿ ಬಳಸಲಾಗುತ್ತಿದ್ದ ಕೃಷಿ ಉತ್ಪನ್ನಗಳಾದ ತೆಂಗಿನಕಾಯಿ, ಸಕ್ಕರೆ ಮತ್ತು ಕಬ್ಬು, ಮರ, ಶ್ರೀಗಂಧದ ಮರಗಳು ಮತ್ತು ತೆಂಗಿನಕಾಯಿಗಳನ್ನು ಸಾಮಾನ್ಯವಾಗಿ ತೆರೆದ ಸಾಂಪ್ರದಾಯಿಕ ಕರಕುಶಲ ವಸ್ತುಗಳನ್ನು ಸಾಗಿಸಲಾಗುತ್ತಿತ್ತು. ಇವು ಸ್ಥಳೀಯ ವ್ಯಾಪಾರಿಗಳಿಂದ ಒಳನಾಡಿನಿಂದ ನದಿ ಕಾಲುವೆಗಳ ಮೂಲಕ ಸರಕುಗಳನ್ನು ಹೆಚ್ಚು ಸಂಗ್ರಹಿಸಲಾಗುತ್ತಿತ್ತು. ಸಾಮಾನ್ಯವಾಗಿ ಪೋರ್ಚುಗೀಸ್ ವ್ಯಾಪಾರಿಗಳು ಪೋರ್ಚುಗಲ್ ಮತ್ತು ಇತರ ದೇಶಗಳಿಂದ ವಿನಿಮಯ ವಸ್ತುಗಳಾದ ಕುದುರೆಗಳು, ರೇಷ್ಮೆ, ಸುಗಂಧ ದ್ರವ್ಯಗಳು, ತಾಮ್ರ, ಚಿನ್ನ, ಉಪ್ಪು ಮತ್ತು ಸಿಂಧೂರವನ್ನು ತರುತ್ತಿದ್ದರು. ಇದರಿಂದ ಸ್ಥಳಿಯರು ಮತ್ತು ಪೋರ್ಚುಗೀಸರ ನಡುವೆ ವರ್ಷದಿಂದ ವರ್ಷಕ್ಕೆ ವಿನಿಮಯವಾಗುವ ಸರಕುಗಳ ಹೆಚ್ಚಳವಾಯಿತು. ಪೋರ್ಚುಗೀಸ್‌ರು ಉತ್ತಮ ಪ್ರಮಾಣದ ಅಕ್ಕಿ ಚೀಲಗಳನ್ನು ಹೊನ್ನಾವರ್, ಬಸ್ರೂರ್

ಮತ್ತು ಭಟ್ಕಳ ಬಂದರುಗಳಂದ ಪಡೆಯುತ್ತಿದ್ದರು. ಪೋರ್ಚುಗೀಸ್ ವ್ಯಾಪಾರಿಗಳು ಬಸ್ರೂರ್ ಮತ್ತು ಗೆರ್ಸೊಪ್ಪಾದಿಂದ ಮೆಣಸು ಸರಬರಾಜಿನ ಏಕಸ್ವಾಮ್ಯ ಪಡೆದರು. ಗೆರ್ಸೊಪ್ಪ ಮತ್ತು ಭಟ್ಕಳದವರು ತಮ್ಮ ವಾರ್ಷಿಕ ಅಕ್ಕಿಯನ್ನು ಪೋರ್ಚುಗೀಸರಿಗೆ ನೀಡುತ್ತಿದ್ದರು.

ಸ್ಥಳಯ ಆಡಳತಗಾರರ ಪ್ರತಿರೋಧವನ್ನು ನಿಗ್ರಹಿಸಲು ಕೋಟೆಯ ಸ್ವಾಧೀನ ಮತ್ತು ನಿರ್ಮಾಣದ ತಂತ್ರಗಳು ಪೋರ್ಚುಗೀಸರಿಗೆ ಏಕೈಕ ಪರಿಹಾರವಾಗಿತ್ತು. ವ್ಯಾಪಾರದ ಮೂಲಕ ಮೆಣಸು ಸಂಗ್ರಹಿಸಲು ಮತ್ತು ಮೆಣಸಿನ ವ್ಯಾಪಾರವನ್ನು ನಿಯಂತ್ರಿಸಲು ಪೋರ್ಚುಗೀಸ್‌ರು ಇಲ್ಲಿನ ಕೋಟೆಗಳನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಾರಂಭಿಸಿತು. ಕೆನರಾ ಕರಾವಳಯ ಭಾಗದಲ್ಲಿ ಕ್ರಮೇಣ ತಮ್ಮ ವ್ಯಾಪಾರದ ನಿಯಂತ್ರಣವನ್ನು ಪಡೆಯುವ ಮೂಲಕ ಪೋರ್ಚುಗೀಸರು ಈ ಪ್ರದೇಶದ ರಫ್ತು ಮತ್ತು ಆಮದುಗಳನ್ನು ಕೇಂದ್ರೀಕರಿಸಲು ಪ್ರಯತ್ನಿಸಿದರು. ಪೋರ್ಚುಗೀಸರು ಮೆಣಸು ವ್ಯಾಪಾರಕ್ಕಾಗಿ ಹೊನ್ನಾವರ ಮೇಲೆ, ಅಕ್ಕಿಗಾಗಿ ಬಸ್ರೂರನ್ನು ಹೆಚ್ಚು ಅವಲಂಬಿತರಾಗಿದ್ದರು. ಮೆಣಸನ್ನು ವಾರ್ಷಿಕವಾಗಿ 1620 ರ ಹೊತ್ತಿಗೆ ಗಂಗಾವಳ ಮತ್ತು ಬಸ್ರೂರ್ ಬಂದರುಗಳಂದ 1500 ಖಂಡಿಗಳನ್ನು (1 ಖಂಡಿ = 220.32 ಕೆಜಿ) ರಫ್ತು ಮಾಡಿದೆ.

ಕೆಳದಿಯ ಅರಸ ದೊಡ್ಡ ಸಂಕಣ್ಣ ನಾಯಕ (1567 ರಿಂದ 1571ರ ವರೆಗೆ ಆಳದ) ಗೊವೇಯ ಪೋರ್ಚುಗೀಸರ ವಿರುದ್ಧವಾಗಿ ಮುತ್ತಿಗೆ ಹಾಕಿದನು. 1586ರ ನಂತರ ಅಧಿಕಾರಕ್ಕೆ ಬಂದ ಸದಾಶಿವನಾಯಕ ನಂತರ ಕೆಳದಿಯರ ಪ್ರಮುಖ ಅರಸನಾದ ವೆಂಕಟಪ್ಪನಾಯಕನು ವಿಜಯನಗರ ಅರಸರಿಂದ ಪ್ರತ್ಯೇಕವಾದ ಸ್ವಂತಂತ್ರ ಆಳ್ವಕೆಯನ್ನು ಪ್ರಾರಂಭಿಸಿದನು. ಬಿಜಾಪೂರದ ಸೈನ್ಯವನ್ನು ಗೆದ್ದು ಹಿಂದಕಟ್ಟಿದನು. ಗೆರುಸೊಪ್ಪೆಯ ರಾಣಿ ಭೈರಾದೇವಿಯನ್ನು ಸೋಲಿಸಿ ಸೆರೆಹಿಡಿದನು. ಅನಂತರ ಪಶ್ಚಿಮ ಕರಾವಳ ಉದ್ದಕ್ಕೂ ಹಲವಾರು ಕಿರಿಯ ಮುಖಂಡರ ಪ್ರದೇಶಗಳನ್ನು ವಶ'ಪಡಿಸಿಕೊಂಡು ಮಲಬಾರಿನ ಗಡಿಯವರೆಗೂ ಸಾಗಿದನು. ಕರಾವಳಯ ಉದ್ದಕ್ಕೂ ವ್ಯಾಪಾರಿ ಕೇಂದ್ರಗಳನ್ನು ಸ್ಥಾಪಿಸಿದನು. ಹೀಗೆ ಕರಾವಳಯ ಅಕ್ಕಿ ಮತ್ತು ಕರಿಮೆಣಸಿನ ವ್ಯಾಪಾರವು ಪೂರ್ತಿಯಾಗಿ ಇಕ್ಕೇರಿ ನಾಯಕರ ಕೈಗೆ ಬಂದಿತು. ವೆಂಕಟಪ್ಪನಾಯಕ ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಬಲಿಷ್ಠನಾದನು. ಆಗ ಗೋವೆಯ ಪೋರ್ಚುಗೀಸ್ ವೈಸರಾಯ ಇವನೊಡನೆ ಸ್ನೇಹವನ್ನು ಬಯಸಿ ವ್ಯಾಪಾರದ ರಿಯಾಯತಿಗಳನ್ನು ಪಡೆಯಲು ಬಯಸಿದನು. ಅಲ್ಲದೇ ಇಕ್ಕೇರಿಯ ಆಸ್ಥಾನಕ್ಕೆ ರಾಯಭಾರಿಯನ್ನು ಕಳಸಿದನು. ಈ ವೆಂಕಟಪ್ಪನ ಆಳ್ವಕೆಯು 1629ರಲ್ಲಿ ಕೊನೆಗೊಂಡಿತು.

1630ರಲ್ಲಿ ಕೆಳದಿಯಲ್ಲಿಯ ಕಿರಿಯ ವಯಸ್ಸಿನ ಅರಸ ವೀರಭದ್ರನ ಮೇಲೆ ಬಿಜಾಪೂರದ ಸುಲ್ತಾನರು ದಾಳಮಾಡಿದರು. ಆಗ ಸೋತ ವೀರಭದ್ರ ಬಿಜಾಪೂರದ ಸುಲ್ತಾನರೊಡನೆ ಮೈಸೂರ ವಿರುದ್ಧ ಸಹಾಯಮಾಡಲು ಒಪ್ಪಂದ ಮಾಡಿಕೊಂಡನು. 1631ರಲ್ಲಿ ಅವನು ಪೋರ್ಚಗೀಸರೊಡನೆಯು ಒಂದು ಒಪ್ಪಂದವನ್ನು ಮಾಡಿಕೊಂಡನು. ಅದರ ಪ್ರಕಾರ ಕೆಂಬೊಲಿಯನ್ ಮತ್ತು ಬಾರ್ಕಲೂರ ಎಂಬ

ಎರಡು ಸ್ಥಳಗಳ ವ್ಯಾಪಾರದ ಅಧಿಕಾರವನ್ನು ಪೋರ್ಚುಗೀಸರಿಗೆ ನಿಡಿದನು. ಕೆಲವು ದಿನಗಳ ನಂತರ ಅಲ್ಲಿನ ಕೋಟೆಗಳನ್ನು ನೆಲಸಮಗೊಳಿಸುವಂತೆ ಪೋರ್ಚುಗಿಸರೊಡನೆ ಪತ್ರ ವ್ಯವಹಾರವನ್ನು ಮಾಡಿದ್ದು. ಅನಂತರ ಪೀಟರ್ ಮಂಡಿ ಎಂಬುವನ ನೇತೃತ್ವದ ಒಂದು ಆಂಗ್ಲರ ತಂಡ ಇಕ್ಕೇರಿಗೆ ತೆರಳಿ ಭಟ್ಕಳದಲ್ಲಿ ಒಂದು ಕೋಟೆಯನ್ನು ಸ್ಥಾಪಿಸಲು ಅನುಮತಿಯನ್ನು ಪಡೆಯಿತು. ಹಾಗಾಗಿ ಆ ನಂತರ ಕರಾವಳಿಯ ವ್ಯಾಪಾರವು ಮೆಲ್ಲಮೆಲ್ಲನೇ ಪೋರ್ಚುಗಿಸರ ಕೈಯಿಂದ ಇಂಗ್ಲಿಷರಿಗೆ ಹಸ್ತಾಂತರವಾಗತೊಡಗಿತು. 1645ರಲ್ಲಿ ಅಧಿಕಾರಕ್ಕೆ ಬಂದ ಕೆಳದಿಯ ಅತೀ ಪ್ರಸಿದ್ಧ ಅರಸ ಶಿಸ್ತುಗಾರ ಶಿವಪ್ಪನಾಯಕ ಪೋರ್ಚುಗೀಸರೊಡನೆ ಸಮರ ಸಾಮರ್ಥ್ಯ ಹಾಗೂ ತಂತ್ರಗಳನ್ನು ಪ್ರದರ್ಶಿಸಿದನು. 1652ರಲ್ಲಿ ಅವನು ಪಶ್ಚಿಮ ಕರಾವಳಿಯಲ್ಲಿನ ಪೋರ್ಚುಗೀಸರನ್ನು ಅವರ ನೆಲೆಗಳಾಗಿದ್ದ ಮಂಗಳೂರು, ಕುಂದಾಪೂರ, ಗಂಗೊಳ್ಳಿ ಮತ್ತು ಹೊನ್ನಾವರಗಳಿಂದ ಬಿಟ್ಟು ಓಡಿಸಿದನು. ಆಗ ಪೋರ್ಚುಗೀಸರು ತಮ್ಮ ಜನರನ್ನೂ ಮತ್ತು ಯುದ್ಧ ಸಾಮಗ್ರಿಗಳನ್ನೂ ಕಳೆದುಕೊಂಡರು. ಆಗ ಶಿವಪ್ಪ ನಾಯಕ ತಾಡ್ರೆಯಿಂದ ಕಾಸರಗೋಡಿನವರೆಗೆ ಕರಾವಳಿಯ ಪ್ರದೇಶಕ್ಕೆ ಒಡೆಯನಾದನು. ಕೆ.ಡಿ ಸ್ವಾಮಿನಾಥರು ಹೇಳುವಂತೆ "ಇಂಗ್ಲಿಷರಿರಲಿ, ಡಚ್ಚರಿರಲಿ, ಪೋರ್ಚುಗೀಸರಿರಲಿ ಅಥವಾ ಅರಬರಿರಲಿ ಇವರಲ್ಲಿ ಯಾವ ವ್ಯಾಪಾರಿಗಳು ಹೆಚ್ಚು ಹಣವನ್ನು ಕೊಡಬಲ್ಲರೊ ಅಂಥವರಿಗೆ ಮಾತ್ರ ಕರಾವಳಿಯ ಅಕ್ಕಿ ಮತ್ತು ಕರಿಮೆಣಸಿನ ಮಾರುಕಟ್ಟೆಗಳು ತೆರೆದಿರುತ್ತಿದ್ದವು". ಕೆಳದಿಯ ಶಿವಪ್ಪನಾಯಕನು 1661ರಲ್ಲಿ ತೀರಿಕೊಂಡನು. ಅವನ ಅನಂತರ 1664ರ ವರೆಗೆ ವೆಂಕಟಪ್ಪನಾಯಕ ಮತ್ತು ಭದ್ರಪ್ಪರು ಆಳಿದರು.

ಕೆಳದಿಯಲ್ಲಿ 1664ರಲ್ಲಿ ಸೋಮಶೇಖರ ನಾಯಕನು ಅಧಿಕಾರಕ್ಕೆ ಬಂದನು. ಈತನ ಆಳ್ವಿಕೆಯ ಅವಧಿಯಲ್ಲಿ ಕರಾವಳಿಯ ವ್ಯಾಪಾರದಲ್ಲಿ ಸ್ಪರ್ಧೆಯುಂಟಾಗಿ ಕೆಲವು ಕಾಲ ಇವನ ಅನುಗ್ರಹ ಡಚ್ಚರ ಮೇಲಾಯಿತು. ಆದರೆ ಸೋಮಶೇಖರ ನಾಯಕ ಮಲಬಾರಿನ ಪಾಳೆಯಗಾರರ ಮೇಲೆ ಹೋರಾಟ ಮಾಡುತ್ತಿದ್ದಾಗ ಡಚ್ಚರು ಸೋಮಶೇಖರ ನಾಯಕನ ಬದಲು ಮಲಬಾರಿನ ಪಾಳೆಯಗಾರರಿಗೆ ಸಹಾಯಮಾಡಿದರು. ಆಗ ಡಚ್ಚರು ಕೆಳದಿಯರ ಸ್ನೆಹವನ್ನು ಕಳೆದುಕೊಂಡರು. ಈ ಸೋಮಶೇಖರನ ನಂತರ ಅವನ ಮಡದಿ ಚೆನ್ನಮ್ಮಾಜಿಯು ಅಧಿಕಾರಕ್ಕೆ ಬಂದಳು (1671–1696). ಇವಳು ಮೈಸೂರಿನೊಡನೆ ನಿರಂತರ ಸಂಘರ್ಷ ಮಾಡಿದಳು. 1690ರಲ್ಲಿ ಔರಂಗಜೇಬನ ಸೈನ್ಯವು ಶಿವಾಜಿಯ ಮಗ ರಾಜಾರಾಮನನ್ನು ಬೆನ್ನಟ್ಟಿ ಬಂದಾಗ ಆತನಿಗೆ ಇವಳು ರಕ್ಷಣೆಯನ್ನು ನೀಡಿ ಮೊಘಲ್ ಸೈನ್ಯವನ್ನು ಸಮರ್ಥವಾಗಿ ಎದುರಿಸಿದಳು. ಕೆಳದಿಯ ಚೆನ್ನಮ್ಮಾಜಿಯು 1678ರಲ್ಲಿ ಪೋರ್ಚುಗೀಸರೊಂದಿಗೆ ಒಂದು ಒಪ್ಪಂದವನ್ನು ಮಾಡಿಕೊಂಡಳು. ಆ ಒಪ್ಪಂದದ ಪ್ರಕಾರ ಚೆನ್ನಮ್ಮ ಪೋರ್ಚುಗೀಸರಿಗೆ ಮಿರಜಾನ್, ಚಂದಾವರ್, ಹೊನ್ನಾವರ, ಭಟ್ಕಳ ಮತ್ತು ಕಲ್ಯಾಣಪುರಗಳಲ್ಲಿ ಚರ್ಚುಗಳನ್ನು ಮತ್ತು ಕಾರಖಾನೆಗಳನ್ನು ಕಟ್ಟಲು ಅನುಮತಿ ನೀಡಿದಳು. ಇವಳ ನಂತರ ಆಕೆಯ ದತ್ತುಮಗ ಬಸವಪ್ಪ (1696–1714) ಅಧಿಕಾರಕ್ಕೆ ಬಂದನು. ಈತ ಮುಸಲ್ಮಾನ ಸೈನ್ಯವನ್ನು ಹೊನ್ನಾಥ,

ಜಡೆ, ಮಿರ್ಜಾನ ಮತ್ತು ಮಹದೇವಪೂರಗಳಿಂದ ಓಡಿಸಿದನು. 1707ರಲ್ಲಿ ಈತ ಪೋರ್ಚುಗೀಸರೊಂದಿಗೆ ಒಂದು ಒಪ್ಪಂದವನ್ನು ಮಾಡಿಕೊಂಡನು, ಆಗ ಪೋರ್ಚುಗೀಸರು ಕರ್ನಾಟಕದ ಕರಾವಳಿಯ ಪ್ರಮುಖ ಸರಕುಗಳಾದ ಅಕ್ಕಿ ಮತ್ತು ಕರಿಮೆಣಸಿನ ವ್ಯಾಪಾರದಲ್ಲಿ ಸರ್ವಸ್ವಾಮಿತ್ವವನ್ನು ಪಡೆಯಲು ಪ್ರಯತ್ನಿಸಿದರು.

ಕ್ರಿ.ಶ 1714ರಲ್ಲಿ ಬಸವಪ್ಪನಾಯಕನ ಮಗ ಸೋಮೇಖರನು ಅಧಿಕಾರಕ್ಕೆ ಬಂದಾಗ ಕರ್ನಾಟಕದ ಕರಾವಳಿಯಲ್ಲಿ ವಿದೇಶಿ ವ್ಯಾಪಾರಸ್ಥರ ಸ್ಪರ್ಧೆಗಳು ಉಲ್ಬಣಗೊಂಡಿದ್ದವು. ಆಗ ಆಂಗ್ಲರು ಸ್ಥಳಿಯ ಅರಸರೊಂದಿಗೆ ತೀವ್ರ ಪೈಪೊಟಿಗಿಳಿದ್ದಿದ್ದರು. 1762ರಲ್ಲಿ ಹೈದರಾಲಿಯು ತನ್ನ ಸಾಮ್ರಾಜ್ಯವನ್ನು ಕರಾವಳಿಯವರೆಗೂ ವಿಸ್ತರಿಸಲು ಬಯಸಿದನು. ಚಿತ್ರದುರ್ಗದ ಮದಕರಿನಾಯಕನ ಸೂಚನೆಯಂತೆ ಹೈದರಾಲಿ ಆಗಿನ ಬಿದನೂರಿನ ರಾಣಿ ವೀರಮ್ಮಾಜಿಯ ಮೇಲೆ 10.000 ಅಶ್ವದಳ ಮತ್ತು 20.000 ಕಾಲ್ದಳದೊಂದಿಗೆ ದಾಳಿ ಮಾಡಿದನು. ಹೈದರಾಲಿಯು ಅವಳಿಗೆ ತಾನು ಪೂರ್ಣ ಶರಣಾಗಿ ತಾನೂ ಕೊಡುವ ಗೌರವಧನವನ್ನು ಸ್ವೀಕರಿಸುವಂತೆ ತಿಳಿಸಿದನು. ಹೈದರಾಲಿಯ ಮಾತನ್ನು ಅವಳು ಒಪ್ಪದೇ ಪರಾಕ್ರಮದಿಂದ ಹೋರಾಡಿದಳು. ಅನಂತರ 1763ರಲ್ಲಿ ಹೈದರಾಲಿಗೆ ಸೆರೆಯಾದಳು. ವೀರಮ್ಮನನ್ನು ಮತ್ತು ಆಕೆಯ ದತ್ತು ಮಗ ಸೋಮಶೇಖರನನ್ನು ಹೈದರಾಲಿ ಶ್ರೀರಂಗಪಟ್ಟಣಕ್ಕೆ ಸ್ಥಳಾಂತರಿಸಿದನು. ಕರಾವಳಿಯನ್ನೊಳಗೊಂಡಂತೆ ಆಕೆಯ ಸಮಗ್ರ ರಾಜ್ಯವು ಆಗ ಮೈಸೂರಿಗೆ ಸೇರಿತು. ಶತಮಾನಗಳಷ್ಟು ಹಳೆಯದಾದ ಕೆಳದಿಯರ ಮತ್ತು ಮೈಸೂರಿನವರ ಮಧ್ಯದ ಸಂರ್ಘವು ಬಿದನೂರು ಮೈಸೂರಿಗೆ ಸೇರುವುದರೊಂದಿಗೆ ಕೊನೆಗೊಂಡಿತು.

"ಬ್ರಿಟಿಷ ಸರಕಾರ ಆಡಳಿತಾತ್ಮಕವಾಗಿ ಕೆನರಾವನ್ನು ನಿಯಂತ್ರಣಕ್ಕೆ ತೆಗೆದುಕೊಂಡು ಬ್ರಿಟಿಷ್ ವಿರೋಧಿ ಹೋರಾಟಗಳನ್ನು ಹತ್ತಿಕ್ಕಲು, ಸ್ಥಳಿಯರು ಬ್ರಿಟಿಷ್ ಮಾದರಿಯ ಆಡಳಿತವನ್ನು ಒಪ್ಪಿಕೊಳ್ಳುವಂತೆ ಮಾಡಲು ಹಾಗೂ ಇಲ್ಲಿನ ಬಂದರು ಪಟ್ಟಣಗಳು ಮತ್ತು ಅವುಗಳ ಒಳನಾಡುಗಳನ್ನು ವ್ಯಾಪಾರದ ಉದ್ಧೇಶಕ್ಕೆ ಗರಿಷ್ಠವಾಗಿ ಬಳಸಿಕೊಳ್ಳಲು 1862ರಲ್ಲಿ ಕೆನರಾ ಪ್ರಾಂತ್ಯವನ್ನು ದಕಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಾಗಿ ವಿಂಗಡಿಸಿದರು. ದಕಿಣ ಕನ್ನಡವನ್ನು ಮದ್ರಾಸ ಪ್ರಾಂತ್ಯಕ್ಕೆ ಸೇರಿಸಿದರು ಮತ್ತು ಉತ್ತರ ಕನ್ನಡವನ್ನು ಮುಂಬಯಿ ಪ್ರಾಂತ್ಯಕ್ಕೆ ಸೇರಿಸಿದರು. ಹೀಗೆ ಎರಡು ಪ್ರಾಂತ್ಯಗಳು ತಮ್ಮ ಲಾಭ-ನಷ್ಟದ ಲೆಕ್ಕಾಚಾರದೊಂದಿಗೆ ಕೆನರಾವನ್ನು ಹಂಚಿಕೊಂಡು ಬ್ರಿಟಿಷ್ ಇಂಡಿಯಾದ ಹಾಗೂ ತಮ್ಮ ತಾಯ್ನಾಡಿನ ಅವಶ್ಯಕತೆಗಳನ್ನು ಪೂರೈಸಿಕೊಂಡರು."

1860ರ ದಶಕದಲ್ಲಿ ಬ್ರಿಟಿಷ್ ಸರ್ಕಾರಕ್ಕೆ ಎದುರಾದ ದೊಡ್ಡ ಸಮಸ್ಯೆಯೆಂದರೆ ಬ್ರಿಟನ್ನಿನಲ್ಲಿ ತಲೆದೋರಿದ ಹತ್ತಿಯ ಬಿಕ್ಕಟ್ಟು. ಅಮೆರಿಕಾದಲ್ಲಿ ಉತ್ತರ ಮತ್ತು ದಕ್ಷಿಣದ ಸಂಸ್ಥಾನಗಳ ಮಧ್ಯೆ ಗುಲಾಮಗಿರಿ ವಿಚಾರವಾಗಿ ಆಂತರಿಕ ಕಲಹ ತಲೆದೊರಿದ್ದು ಈ ಬಿಕ್ಕಟ್ಟಿಗೆ ಕಾರಣವಾಗಿತ್ತು. ಇದರಿಂದ ಯುರೋಪಿನ ಕೈಗಾರಿಕೆಗಳು ಹಾಗೂ ವರ್ತಕರು ನಷ್ಟವನ್ನು ಅನುಭವಿಸಬೇಕಾಯಿತು. ಯುರೋಪಿನ

ರಾಷ್ಟ್ರಗಳು ಆರ್ಥಿಕ ಹಿನ್ನಡೆಯನ್ನು ಕಂಡವು. ಆಗ ಯುರೋಪಿಯನ್ನ ವರ್ತಕರು ಸಹಜವಾಗಿ ಭಾರತದತ್ತ ಆಕರ್ಷಿತರಾದರು. ನಂತರ ಬ್ರಿಟಿಷರು ಭಾರತದಲ್ಲಿ ವಿಶೇಷವಾಗಿ ಹತ್ತಿ ಬೆಳೆಯಲಾಗುತ್ತಿದ್ದ ಮತ್ತು ಬೆಳೆಯಬಹುದಾದ ಪ್ರದೇಶಗಳಿಗೆ ತಮ್ಮ ಆಧ್ಯತೆಯನ್ನು ನೀಡಲಾರಂಭಿಸಿದರು. ಬ್ರಿಟನ್ನಿನ ಕೈಗಾರಿಕಾ ಮಾಲೀಕರು ಹಾಗೂ ವರ್ತಕರು ಅಮೆರಿಕಾದಿಂದ ಪೂರೈಕೆಯಾಗುತ್ತಿದ್ದ ಹತ್ತಿಯಲ್ಲಿ ಅಲ್ಲಿನ ಆಂತರಿಕ ಕಲಹದಿಂದಾಗಿ ಇಳಿಮುಖ ಕಂಡುಬಂದಾಗ ಭಾರತದಿಂದ ಹತ್ತಿಯನ್ನು ಆಮದು ಮಾಡಿಕೊಳ್ಳಲು ನಿರ್ಧಾರ ಕೈಗೊಂಡರು. ಉತ್ತರ ಕನ್ನಡ ಜಿಲ್ಲೆಯ ಸುತ್ತಮುತ್ತ ಹುಬ್ಬಳ್ಳಿ, ಧಾರವಾಡ ಮುಂತಾದ ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದ್ದ ಹತ್ತಿಗೆ ಬೇಡಿಕೆ ಹೆಚ್ಚಿತು. ಆ ಸಂದರ್ಭದಲ್ಲಿ ಎದುರಾದ ದೊಡ್ಡ ಸಮಸ್ಯೆ ಎಂದರೆ ಹತ್ತಿಯನ್ನು ಸಾಗಾಣಿಕೆ ಮಾಡಲು ಉತ್ತಮ ಬಂದರು ಇಲ್ಲದಿರುವುದು. ದೊಡ್ಡ ದೊಡ್ಡ ಹಡಗುಗಳು ತಂಗಲು ಹಾಗೂ ಅಪಾರ ಪ್ರಮಾಣದ ಸರಕುಗಳನ್ನು ಹಡಗುಗಳಿಗೆ ತುಂಬಿಸಲು ಹಾಗೂ ಇಳಿಸಲು ಕುಮಟಾ ಹಾಗೂ ಹೊನ್ನಾವರ ಬಂದರುಗಳಲ್ಲಿ ಸರಿಯಾದ ವ್ಯವಸ್ಥೆ ಇರಲಿಲ್ಲ. ಈ ಕಾರಣಕ್ಕಾಗಿ ಆಂಗ್ಲರು ಸದಾಶಿವಘಡ ಬಂದರನ್ನು ಪ್ರಮುಖ ಬಂದರನ್ನಾಗಿ ಅಭಿವೃದ್ಧಿಪಡಿಸುವ ಯೋಜನೆಯನ್ನು ಸಿದ್ಧಪಡಿಸಿದರು. ಈ ಕಾಮಗಾರಿ ಪ್ರಾರಂಭಗೊಳ್ಳುವ ಕಾಲಕ್ಕೆ ಅಮೆರಿಕಾದ ಆಂತರಿಕ ಯುದ್ಧ ಕೊನೆಗೊಂಡು ಯುರೋಪಿನ ಕೈಗಾರಿಕೆಗಳಿಕೆ ಹಿಂದಿನಂತೆಯೇ ಹತ್ತಿ ಪೂರೈಕೆಯಾದಾಗ ಆರಂಭಿಸಿದ ಈ ಸದಾಶಿವಘಡ ಬಂದರು ಅಭಿವೃದ್ಧಿ ಯೋಜನೆಯನ್ನು ಕೈಬಿಟ್ಟರು. ಈ ಮೇಲಿನ ತಿಳಿಸಿದ ಆಕರ ಮಾಹಿತಿಗಳಿಂದ ವಸಾಹತು ಕಾಲದ ವ್ಯಾಪಾರದ ಕುರಿತಾಗಿ ತಿಳಿದು ಬರುವ ಪ್ರಮುಖ ವಿಷಯಾಂಶಗಳೆಂದರೆ; ವಸಾಹತುಕಾಲದಲ್ಲಿ ಉತ್ತರ ಕನ್ನಡ ಜಿಲ್ಲೆಯ ಘಟ್ಟದ ಕೆಳಗಿನ ಪ್ರಮುಖ ವ್ಯಾಪಾರದ ಸ್ಥಳಗಳೇಂದರೆ, ಕಾರವಾರ, ಸದಾಶಿವಗಡ, ಚಂಡಿಯಾ, ಬಿಂಫಿ, ಅಂಕೋಲಾ, ಬೇಲೀಕೇರಿ, ಗಂಗಾವಳಿ, ಕುಮಟಾ, ತದಡಿ, ಗೋಕರ್ಣ, ಹೊನ್ನಾವರ, ಮಂಕಿ, ಮುರಡೇಶ್ವರ, ಶಿರಾಳಿ ಮತ್ತು ಭಟ್ಕಳಗಳಾಗಿವೇ. ಇನ್ನು ಘಟ್ಟದ ಮೇಲಿನ ವ್ಯಾಪಾರದ ಪ್ರಮುಖ ವ್ಯಾಪಾರದ ಸ್ಥಳಗಳೆಂದರೆ ಯಲ್ಲಾಪೂರ, ಮುಂಡಗೋಡ, ಮಳಗಿ, ಪಾಳ, ಶಿರಸಿ, ಬನವಾಸಿ, ಸ್ವಾದಿ, ಸಿದ್ಧಾಪುರ, ಗೆರುಸೊಪ್ಪೆ, ಬೀಳಗಿಗಳು ಆಗಿದ್ದವು.

ವಸಾಹತುಶಾಹಿ ಶಕ್ತಿಗಳ ಆಗಮನದೊಂದಿಗೆ ಬದಲಾದ ವ್ಯಾಪಾರವು ಭಾರತದ ಸಾಗರೋತ್ತರ ಪ್ರಾಚೀನ ವೈಭವ ಅಂತಿಮವಾಗಿ ಸಮಯದೊಂದಿಗೆ ಮರೆಯಾಯಿತು. ವ್ಯಾಪಾರದ ಆಯಾಮಗಳು ಪಾಶ್ಚಾತ್ಯ ಪ್ರಪಂಚಕ್ಕೆ ಭಾರತವನ್ನು ಆಧುನಿಕತೆಗೆ ನಿರ್ದಿಷ್ಟ ಸರಕುಗಳ ಪೂರೈಕೆದಾರರನ್ನಾಗಿ ಮಾಡಿತು. ನೌಕಾಯಾನ ಮಾರ್ಗಗಳಂತಹ ವ್ಯಾಪಾರದ ಹಾದಿಗಳು ಪರಿಣಾಮಕಾರಿಯಾಗಿ ಬಳಕೆಗೆ ಬಂದವು. ನೌಕಾಯಾನವು ಗಾಳಿಯ ದಿಕ್ಕನ್ನು ಅವಲಂಬಿಸಿತ್ತು. ಕೆಂಪು ಸಮುದ್ರ ಮತ್ತು ಕರಾವಳಿಯ ನಡುವೆ ಪ್ರಯಾಣಿಸುವ ಹಡಗುಗಳು ಭಾರತದ ಮಾನ್ಸೂನ್‌ಅನ್ನು ಮಾತ್ರ ಅವಲಂಬಿಸಿದ್ದವು. ಆಗ್ನೇಯ ಏಷ್ಯಾದ

ಆರ್ಥಿಕತೆ ಇಂದಿಗೂ ಹೆಚ್ಚಾಗಿ ಮಾನ್ಸೂನ್ ಮಾರುತಗಳು ಮತ್ತು ಅದರೊಂದಿಗೆ ಬರುವ ಮಳೆಯ ಮೇಲೆ ಅವಲಂಬಿತವಾಗಿರುತ್ತದೆ.

ಕಡಲಯಾಣಿಗಳು ನೀರಿನಿಂದ ಎದುರಾಗುವ ವಿವಿಧ ಸವಾಲುಗಳ ವಿರುದ್ಧ ನೂತನ ತಂತ್ರಜ್ಞಾನ ಮತ್ತು ಕೌಶಲ್ಯಗಳನ್ನು ಕಂಡುಕೊಂಡರು. ಅದು ವ್ಯಾಪಕವಾಗಿ ಹರಡಿ ಕಡಲಯಾಣ ಮೊದಲಿಗಿಂತ ಸುಲಭವಾಗತೊಡಗಿತು. ವಿಭಿನ್ನ ನಾಡಿನ ಜನರು ಮತ್ತು ಮುಕ್ತವಾಗಿ ಪ್ರಪಂಚದ ವಿವಿಧ ಭಾಗಗಳಿಗೆ ಹರಡಲು ಸಾಧ್ಯವಾಯಿತು. ಅವರೊಟ್ಟಿಗೆ ಪ್ರಪಂಚದ ವಿವಿಧ ಭಾಗಗಳಿಗೆ ವಿಭಿನ್ನ ಆಲೋಚನೆಗಳು, ನಂಬಿಕೆಗಳು ಮತ್ತು ಜ್ಞಾನವು ಹರಡಿತು. ಕರಾವಳಿಯ ಉದ್ದಕ್ಕೂ ಬಂದರುಗಳು ಹೆಚ್ಚು ಹೆಚ್ಚು ಅಭಿವೃದ್ಧಿಹೊಂದಿದವು. ಬಲವಾದ ಕಡಲವ್ಯಾಪಾರದ ದೃಷ್ಟಿಕೋನವನ್ನು ಹೊಂದಿರುವ ಯುರೋಪಿಯನ್ ವ್ಯಾಪಾರ ಸಂಸ್ಥೆಗಳು ಕರಾವಳಿ ಪ್ರದೇಶಗಳಲ್ಲಿ ಕೇಂದ್ರೀಕರಿಸಿದವು.

ಕಡಲ ಇತಿಹಾಸದಲ್ಲಿ ಭೂಮಿ ಮತ್ತು ಸಮುದ್ರದ ನಡುವಿನ ಅಂತರಸಂಪರ್ಕವಾಗಿ ಕಾರ್ಯನಿರ್ವಹಿಸಿದ ಕರಾವಳಿ ಒಂದು ಪ್ರಮುಖ ಸ್ಥಾನವನ್ನು ಪಡೆದಿದೆ. ಕರಾವಳಿ ಕೇವಲ ಉನ್ನತ ಮಟ್ಟದ ಜೀವವೈವಿಧ್ಯತೆಯನ್ನು ಹೊಂದಿರುವುದು ಮಾತ್ರವಲ್ಲದೆ ಸಾವಿರಾರು ವರ್ಷಗಳಿಂದ ಬೇರೆ ಪ್ರದೇಶದಿಂದ ವಸಾಹತುಗಾರರನ್ನು ಮತ್ತು ಪ್ರಯಾಣಿಕರನ್ನ ತನ್ನೆಡೆಗೆ ಆಕರ್ಷಿಸಿದೆ. ಅವರಲ್ಲಿ ಹೆಚ್ಚಿನವರು ವ್ಯಾಪಾರಕ್ಕಾಗಿ ಇಲ್ಲಿ ಬಂದರು. ಜೊತೆಗೆ ಕರಾವಳಿಯು ಕ್ರೈಸ್ತ ಮಿಷನರಿಗಳ ಚಟುವಟಿಕೆಗಳ ಕೇಂದ್ರ ಪ್ರದೇಶವಾಗಿತ್ತು. ಕರ್ನಾಟಕದ ಸುಮಾರು 200 ಮೈಲುಗಳಷ್ಟು ವಿಶಾಲವಾದ ಕರಾವಳಿ ತೀರ ಪ್ರದೇಶಗಳಲ್ಲಿ ಪ್ರಾಚೀನ ಕಾಲದಿಂದಲೂ ಮುಕ್ತವಾಗಿ ಸರಕುಗಳ ಹೋಗಿಬರುತ್ತಿದ್ದವು. ಸಮುದ್ರಗಳು ಮತ್ತು ಸಾಗರಗಳು ಸಂಪನ್ಮೂಲಗಳ ಆಗರಗಳಾಗಿದ್ದು, ಇವು ಸಮೃದ್ಧ ವೈವಿಧ್ಯತೆಯನ್ನು ಮಾತ್ರವಲ್ಲದೆ ವಿದೇಶಿ ವ್ಯಾಪಾರಿಗಳಲ್ಲಿ ಪ್ರಬಲ ಪ್ರಚೋದನೆಯನ್ನು ಸಹ ಹೊಂದಿವೆ. ಕರಾವಳಿ ಪ್ರದೇಶದ ನಿಯಂತ್ರಣ ಮತ್ತು ಹಿಡಿತದ ವಿಷಯವು ವಿವಿಧ ವಿದೇಶಿ ವ್ಯಾಪಾರಿಗಳ ನಡುವೆ ಜಗಳಕ್ಕೆ ಒಂದು ನೆಲೆಯನ್ನು ಸೃಷ್ಟಿಸಿತು. ಭಾರತದ ಮಾರುಕಟ್ಟೆಗಳು ಸರಕುಗಳ ವಿನಿಮಯಕ್ಕಾಗಿ ಹಲವಾರು ವಿದೇಶಿ ವ್ಯಾಪಾರಿಗಳನ್ನು ಆಕರ್ಷಿಸಿದವು. ವ್ಯಾಪಾರಿಗಳು ಸಮುದ್ರದಲ್ಲಿ ಮತ್ತು ಬಂದರು ಪ್ರದೇಶಗಳಲ್ಲಿ ಬಹುಮಟ್ಟಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಅನುಭವಿಸಿದರು. ಭಾರತದ ದಕ್ಷಿಣ ಭಾಗವು ಸುದೀರ್ಘ ಕರಾವಳಿಯಿಂದ ಕೂಡಿದ್ದು, ಮಾತ್ರವಲ್ಲದೆ ಅತ್ಯುತ್ತಮ ವ್ಯಾಪಾರಿ ಸಮುದಾಯಗಳ ಬಂದರು ಮತ್ತು ಸಕ್ರಿಯ ಉದ್ಯಮ ಗುಂಪುಗಳು ಕರ್ನಾಟಕದ ವಾಣಿಜ್ಯ ಗಡಿಯನ್ನು ಸಮುದ್ರದಾದ್ಯಂತ ಮತ್ತು ಪಾಶ್ಚಿಮಾತ್ಯ ಜಗತ್ತಿನ ತೀರಗಳನ್ನು ಮುಟ್ಟುವಂತೆ ಮಾಡಿದವು. ಕರಾವಳಿ ಕರ್ನಾಟಕದ ವಿಶಾಲವಾದ ಕರಾವಳಿ ತೀರವು ಆಮದು ಮತ್ತು ರಫ್ತಿಗೆ ಬಹಳ ಸ್ವಾಗತಾರ್ಹ ಹಾಗೂ ಆಕರ್ಷಕವಾಗಿದೆ. ಈ ಪ್ರದೇಶ ಸಮುದ್ರಕ್ಕೆ ಹತ್ತಿರವಿರುವ ಕಾರಣ ಕ್ಷಾಮ ಅಥವಾ ಬರಗಾಲಕ್ಕೆ ತುತ್ತಾಗುವ ಸಾಧ್ಯತೆ ಕಡಿಮೆಯಾಗಿತ್ತು. ಸಹ್ಯಾದ್ರಿ ಶ್ರೇಣಿ ಸೇರಿದಂತೆ ಈ ಪ್ರದೇಶದ ಶ್ರೀಮಂತ ಜೀವವೈವಿಧ್ಯತೆಯು ಈ ಕರಾವಳಿಯನ್ನು ವಿಶ್ವದ

ಅತ್ಯಂತ ಶ್ರೀಮಂತ ಮತ್ತು ಶ್ರೀಮಂತ ಕರಾವಳಿಗಳಲ್ಲಿ ಒಂದನ್ನಾಗಿ ಮಾಡಿದೆ. ಹಲವಾರು ಪಶ್ಚಿಮ ಏಷ್ಯಾದ ಸಮುದಾಯಗಳು ಪಶ್ಚಿಮ ಕರಾವಳಿಯಲ್ಲಿ ನೆಲೆಸಿದರಿಂದ ಅದು ಕರಾವಳಿಗೆ ಭಾಷಾ ವೈವಿಧ್ಯತೆ ಮಾತ್ರವಲ್ಲದೆ, ಅಲ್ಲಿ ಮಿಶ್ರ ಸಮಾಜವನ್ನೂ ಸೃಷ್ಟಿಸಿದವು. ಹಾಗಾಗಿ ಕರಾವಳಿಯ ಸಮುದಾಯಗಳಲ್ಲಿ ಧರ್ಮ, ಆಹಾರ ಪದ್ಧತಿ, ಬಟ್ಟೆ, ಮತ್ತು ಎಲ್ಲಾ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ವೈವಿಧ್ಯತೆಯನ್ನು ಕಾಣಬಹುದು. ಅದು ವ್ಯಾಪಾರದ ಜೊತೆಗೆ ನಗರೀಕರಣ ಮತ್ತು ಸಾಂಸ್ಕೃತಿಕ ವಿನಿಮಯಕ್ಕೆ ಪ್ರಚೋದನೆಯನ್ನು ನೀಡಿತು.

**ಪರಾಮರ್ಶನ ಗ್ರಂಥಗಳು**

1. ದಿವಾಕರ ಆರ್.ಆರ್ – ಕರ್ನಾಟಕ ಪರಂಪರೆ. ಸಂ.2, ಮಧ್ಯಕಾಲ ಮತ್ತು ಆಧುನಿಕ ಕಾಲ.2014.
2. ಮೋಹನಕೃಷ್ಣ ರೈ. ಕೆ., 2010, ಕೆನರಾದ ವಿಭಜನೆ–ಹತ್ತಿ ರಾಜಕೀಯದ ವಿಶ್ಲೇಷಣೆ, ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ.ಹಂಪಿ.
3. Pearson.M.N, (1976). *Merchantsand Rulersin Gujarat: The Response to the Portuguese in the Sixteenth Century*. London: University of California Press.
4. Sharma. Y, (2010), *Coastal Histories: Society and Ecologyin Pre-modern India*, Delhi: Primus Books.